# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 878 (1003) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 15.12.2025 |
| ಉತ್ತರಿಸುವ ಸಚಿವರು | : | ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರು. |

*******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಯಾದಗಿರಿ ಜಿಲ್ಲೆಯ ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿನ ರಾಸಾಯನಿಕ ಕೈಗಾರಿಕೆಗಳಿಂದ ಹೊರಹೊಮ್ಮುತ್ತಿರುವ ವಿಷಗಾಳಿ ಮತ್ತು ಅದರಿಂದ ಉಂಟಾಗಿರುವ ಮಾರಕ ರೋಗಗಳ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; | ಯಾದಗಿರಿ ಜಿಲ್ಲೆಯ ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿನ ರಾಸಾಯನಿಕ ಕೈಗಾರಿಕೆಗಳಿಂದ ರಾಸಾಯನಿಕ ವಿಷಗಾಳಿಯಿಂದ ಮಾರಕ ರೋಗಗಳು ಕಂಡು ಬಂದಿರುವುದಿಲ್ಲ. |
| ಆ) | ಜಿಲ್ಲಾ ಕೇಂದ್ರದಿಂದ 38 ಕಿ.ಮೀ ದೂರದಲ್ಲಿರುವ ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿನ ರಾಸಾಯನಿಕ ತ್ಯಾಜ್ಯದಿಂದ ಸುತ್ತಲಿನ 15 ಕ್ಕೂ ಹೆಚ್ಚು ಗ್ರಾಮಗಳು ಮತ್ತು ಅಲ್ಲಿ ವಾಸಿಸುತ್ತಿರುವ ಜನರ ಮೇಲೆ ವ್ಯತಿರಿಕ್ತ ಪರಿಣಾಮಗಳಿಂದ ಅಪಾಯಕಾರಿಕ ಜೀವನ ಮೃತ್ಯು ಉದ್ಭವಿಸಿರುವುದಕ್ಕೆ ಯಾವ ಕ್ರಮ ಕೈಗೊಳ್ಳಲಾಗವುದು; | ಜಿಲ್ಲಾ ಕೇಂದ್ರದಿಂದ 38 ಕಿ.ಮೀ ದೂರದಲ್ಲಿರುವ ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿನ ರಾಸಾಯನಿಕ ತ್ಯಾಜ್ಯದಿಂದ ಸುತ್ತಲಿನ 15 ಕ್ಕೂ ಹೆಚ್ಚು ಗ್ರಾಮಗಳು ಮತ್ತು ಅಲ್ಲಿ ವಾಸಿಸುತ್ತಿರುವ ಜನರ ಮೇಲೆ ವ್ಯತಿರಿಕ್ತ ಪರಿಣಾಮಗಳಿಂದ ಅಪಾಯಕಾರಿಕ ಜೀವನ ಮೃತ್ಯು ಉದ್ಭವಿಸಿರುವುದಿಲ್ಲ. |
| ಇ) | ರಾಸಾಯನಿಕ ಕಾರ್ಖಾನೆಗಳಿಂದ ಮಾರಕ ರೋಗಗಳಿಗೆ ತುತ್ತಾಗಿ ಜೀವಿತಾವಧಿ ಕಡಿಮೆಯಾಗಿ ನರಕ ಜೀವನ ಅನುಭವಿಸುತ್ತಿರುವ ಜನರಿಗೆ ಸರ್ಕಾರದಿಂದ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು; | ರಾಸಾಯನಿಕ ಕಾರ್ಖಾನೆಗಳಿಂದ ಮಾರಕ ರೋಗಗಳಿಗೆ ತುತ್ತಾಗಿ ಜೀವಿತಾವಧಿ ಕಡಿಮೆಯಾಗಿರುವುದು ಕಂಡು ಬಂದಿರುವುದಿಲ್ಲ. |

| | | |
|---|---|---|
| ಈ) | ಡಿಸೆಂಬರ್ 2024 ರಲ್ಲಿ ಪರಿಸರ ಮಂಡಳಿಯ ತಾಂತ್ರಿಕ ಸಮಿತಿ ವರದಿ ನೀಡಿದ್ದರೂ ಅದರ ಶಿಫಾರಸ್ಸನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸದ ಪರಿಸರ ಇಲಾಖೆಯ ಅಧಿಕಾರಿಗಳ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು; | ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಯಾದಗಿರಿ ಜಿಲ್ಲೆ ಮತ್ತು ತಾಲ್ಲೂಕಿನ ಕಡೆಚೂರು ಮತ್ತು ಬಾಡಿಯಾಳ ಗ್ರಾಮ ವ್ಯಾಪ್ತಿಯ 3240 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪಡಿಸಲು ಕೇಂದ್ರ ಸರ್ಕಾರದ ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006 ರ ಅಡಿಯಲ್ಲಿ ಪರಿಸರ ವಿಮೋಚನಾ ಪತ್ರವನ್ನು ದಿನಾಂಕ: 14.10.2016 ರಂದು ಹಾಗೂ ಜಲ (ನಿವಾರಣೆ ಮತ್ತು ಮಾಲಿನ್ಯ ನಿಯಂತ್ರಣ) ಕಾಯ್ದೆ 1974 ಮತ್ತು ವಾಯು (ನಿವಾರಣೆ ಮತ್ತು ಮಾಲಿನ್ಯ ನಿಯಂತ್ರಣ) ಕಾಯ್ದೆ, 1981 ರ ಅಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸ್ಥಾಪನೆಗಾಗಿ ಸಮ್ಮತಿ ಪತ್ರವನ್ನು ದಿನಾಂಕ: 26.03.2018 ರಂದು ಪಡೆದಿರುತ್ತದೆ.<br><br>ಸದರಿ ಕೈಗಾರಿಕಾ ಪ್ರದೇಶದಲ್ಲಿ ಈವರೆವಿಗೂ ಒಟ್ಟು 72 ವಿವಿಧ ರೀತಿಯ ಕೆಂಪು ವರ್ಗದ ಕಾರ್ಖಾನೆಗಳಿಗೆ, 04 ಕಿತ್ತಳೆ ವರ್ಗದ ಕಾರ್ಖಾನೆಗಳಿಗೆ ಹಾಗೂ 05 ಹಸಿರು ವರ್ಗದ ಕಾರ್ಖಾನೆಗಳಿಗೆ ಷರತ್ತುಬದ್ಧ ಸ್ಥಾಪನೆಗಾಗಿ ಸಮ್ಮತಿ ಪತ್ರವನ್ನು ನೀಡಲಾಗಿರುತ್ತದೆ.<br><br>ಅವುಗಳಲ್ಲಿ, 33 ವಿವಿಧ ರೀತಿಯ ಕೆಂಪು ವರ್ಗದ ಕಾರ್ಖಾನೆಗಳು, 01 ಕಿತ್ತಳೆ ವರ್ಗದ ಕಾರ್ಖಾನೆ ಮತ್ತು 01 ಹಸಿರು ವರ್ಗದ ಕಾರ್ಖಾನೆಗೆ ಷರತ್ತುಬದ್ಧ ಚಾಲನಾ ಸಮ್ಮತಿ ಪತ್ರವನ್ನು ನೀಡಲಾಗಿರುತ್ತದೆ. ಇದರಲ್ಲಿ 01 ಸಾಮೂಹಿಕ ತ್ಯಾಜ್ಯ ಶುದ್ಧೀಕರಣ ಘಟಕ, 01 ಅಪಾಯಕಾರಿ ತ್ಯಾಜ್ಯ ಭೂಭರ್ತಿ/ದಹಿಸುವ/ಎಎಫ್‌ಆರ್ ಘಟಕ ಮತ್ತು 25 ಔಷಧ ತಯಾರಿಕಾ ಘಟಕಗಳು, 01 ಕೀಟನಾಶಕ ತಯಾರಿಕಾ ಘಟಕ ಹಾಗೂ 05 ಇತರೆ ಕೈಗಾರಿಕೆಗಳು ಇರುತ್ತವೆ.<br><br>ಸಾಮೂಹಿಕ ತ್ಯಾಜ್ಯ ಶುದ್ಧೀಕರಣ ಘಟಕ / ಅಪಾಯಕಾರಿ ತ್ಯಾಜ್ಯ ಭೂಭರ್ತಿ ಘಟಕ / ಔಷಧ ತಯಾರಿಕಾ ಘಟಕಗಳು / ಕೀಟನಾಶಕ ತಯಾರಿಕಾ ಘಟಕವು ಕೇಂದ್ರ ಸರ್ಕಾರದ ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006 ರ ಅಡಿಯಲ್ಲಿ ಪರಿಸರ ವಿಮೋಚನಾ ಪತ್ರವನ್ನು ಪಡೆದ ನಂತರವೇ ಮಂಡಳಿಯು ಸದರಿ ಘಟಕಗಳಿಗೆ ಜಲ (ನಿವಾರಣೆ ಮತ್ತು ಮಾಲಿನ್ಯ ನಿಯಂತ್ರಣ) ಕಾಯ್ದೆ, 1974 ಮತ್ತು ವಾಯು (ನಿವಾರಣೆ ಮತ್ತು ಮಾಲಿನ್ಯ ನಿಯಂತ್ರಣ) ಕಾಯ್ದೆ 1981 ರ ಅಡಿಯಲ್ಲಿ ಸ್ಥಾಪನೆಗಾಗಿ ಸಮ್ಮತಿ ಹಾಗೂ ಚಾಲನಾ ಸಮ್ಮತಿ ಪತ್ರವನ್ನು ಷರತ್ತುಗಳಿಗೊಳಪಟ್ಟು ನೀಡಲಾಗಿರುತ್ತದೆ.<br><br>ಸದರಿ ಕೈಗಾರಿಕೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಭಾಗಶಃ ಶುದ್ಧೀಕರಿಸಲು ತ್ಯಾಜ್ಯ ನೀರಿನ ಶುದ್ಧೀಕರಣ ಘಟಕಗಳನ್ನು ಅಳವಡಿಸಿದ್ದು, ಭಾಗಶಃ ಶುದ್ಧೀಕರಿಸಿದ ತ್ಯಾಜ್ಯ |

| | | |
|---|---|---|
| | | ನೀರನ್ನು ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಸಾಮೂಹಿಕ ತ್ಯಾಜ್ಯ ನೀರಿನ ಶುದ್ಧೀಕರಣ ಘಟಕಕ್ಕೆ ಮುಂದಿನ ಹಂತದ ಶುದ್ಧೀಕರಣಕ್ಕೆ ಕಳುಹಿಸಲಾಗುತ್ತಿದೆ. ಭಾಗಶಃ ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ಸಾಮೂಹಿಕ ತ್ಯಾಜ್ಯ ನೀರಿನ ಶುದ್ಧೀಕರಣ ಘಟಕದಲ್ಲಿ ವಿವಿಧ ಹಂತದಲ್ಲಿ ಶುದ್ಧೀಕರಿಸಿ, ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ಪುನರ್ಬಳಕೆ ಮಾಡಲು ಷರತ್ತು ಬದ್ಧ ನಿಬಂಧನೆಗಳೊಂದಿಗೆ ಮಂಡಳಿಯು ಸಮ್ಮತಿ ಪತ್ರವನ್ನು ನೀಡಲಾಗಿರುತ್ತದೆ. ಮುಂದುವರೆದು ಪರಿಸರ ವಿಮೋಚನಾ ಪತ್ರವನ್ನು ಪಡೆದ ಎಲ್ಲಾ ಕೈಗಾರಿಕೆಗಳು / ಸಾಮೂಹಿಕ ತ್ಯಾಜ್ಯ ಶುದ್ಧೀಕರಣ ಘಟಕ / ಅಪಾಯಕಾರಿ ತ್ಯಾಜ್ಯ ನಿರ್ವಹಣ ಘಟಕಗಳು Online Continuous Emission / Effluent Monitoring System (OCEMS) ಅಳವಡಿಸಿ, ಅದನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ Server ಗಳಿಗೆ ಜೋಡಿಸಲಾಗಿರುತ್ತದೆ.<br><br>ಸದರಿ ಕೈಗಾರಿಕಾ ಪ್ರದೇಶದ ಸುತ್ತಮುತ್ತ ಇರುವ ಗ್ರಾಮಸ್ಥರಿಂದ ಕೈಗಾರಿಕಾ ಪ್ರದೇಶದಲ್ಲಿರುವ ಕೈಗಾರಿಕೆಗಳ ವಿರುದ್ಧ ಜಲ ಮತ್ತು ವಾಯು ಮಾಲಿನ್ಯದ ಕುರಿತು ಸಾರ್ವಜನಿಕ ದೂರುಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ ಸದರಿ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಎಲ್ಲಾ ಕೈಗಾರಿಕೆಗಳನ್ನೊಳಗೊಂಡಂತೆ ಸಾಮೂಹಿಕ ತ್ಯಾಜ್ಯ ನೀರು ಶುದ್ಧೀಕರಣ ಘಟಕ ಹಾಗೂ ಅಪಾಯಕಾರಿ ತ್ಯಾಜ್ಯ ಭೂಭರ್ತಿ/ದಹಿಸುವ/ಎಎಫ್ಆರ್ ಘಟಕವನ್ನು ಪರಿವೀಕ್ಷಣೆ ನಡೆಸಿ, ಜಲ ಹಾಗೂ ವಾಯು ಮಾಲಿನ್ಯದ ಕಾರಣ ಹಾಗೂ ಸೂಕ್ತ ಮಾರ್ಗೋಪಾಯಗಳನ್ನು ಸೂಚಿಸಲು ಮಂಡಳಿಯು ತಾಂತ್ರಿಕ ಸಮಿತಿಯನ್ನು ರಚಿಸಿತ್ತು. ಸದರಿ ಸಮಿತಿಯು ಕೈಗಾರಿಕಾ ಪ್ರದೇಶವನ್ನು ಡಿಸೆಂಬರ್, 2024 ರಲ್ಲಿ ಪರಿವೀಕ್ಷಣೆ ನಡೆಸಿ ವರದಿಯನ್ನು ಮಂಡಳಿಗೆ ಸಲ್ಲಿಸಿರುತ್ತದೆ.<br><br>ಸದರಿ ತಾಂತ್ರಿಕ ಸಮಿತಿಯ ವರದಿಯ ಪ್ರಕಾರ ಪರಿವೀಕ್ಷಣಾ ಸಮಯದಲ್ಲಿ ಗಮನಿಸಲಾದ ನ್ಯೂನ್ಯತೆಗಳನ್ನು ಚರ್ಚಿಸಲು ಸದರಿ ಕೈಗಾರಿಕೆಗಳೊಂದಿಗೆ ದಿನಾಂಕ:15.04.2025 ರಂದು ಕೇಂದ್ರ ಕಚೇರಿಯಲ್ಲಿ ಸಭೆ ನಡೆಸಲಾಗಿರುತ್ತದೆ. ಸದರಿ ಸಭೆಯಲ್ಲಿ ಮಂಡಳಿಯ ಸಮ್ಮತಿ ಪತ್ರದ ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸದಿರುವ ಕೈಗಾರಿಕೆಗಳ ವಿರುದ್ಧ ಜಲ (ನಿವಾರಣೆ ಮತ್ತು ಮಾಲಿನ್ಯ ನಿಯಂತ್ರಣ) ಕಾಯ್ದೆ, 1974 ಮತ್ತು ವಾಯು (ನಿವಾರಣೆ ಮತ್ತು ಮಾಲಿನ್ಯ ನಿಯಂತ್ರಣ) ಕಾಯ್ದೆ, 1981 ರಂತೆ ಕೂಡಲೇ ಸೂಕ್ತ ಕ್ರಮಕೈಗೊಳ್ಳುವಂತೆ ವಲಯ ಹಿರಿಯ ಪರಿಸರ ಅಧಿಕಾರಿ, ಕಲಬುರಗಿ ವಲಯ ಇವರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿರುತ್ತದೆ. ಸದರಿ |

| | | |
|---|---|---|
| | | ನಿರ್ದೇಶನದಂತೆ ದಿನಾಂಕ:15.05.2025 ರಂದು 9 ಕೈಗಾರಿಕೆಗಳಿಗೆ ಮತ್ತು ದಿನಾಂಕ:26.05.2025 ರಂದು 01 ಸಾಮೂಹಿಕ ತ್ಯಾಜ್ಯ ಶುದ್ಧೀಕರಣ ಘಟಕಕ್ಕೆ ಜಲ (ನಿವಾರಣೆ ಮತ್ತು ಮಾಲಿನ್ಯ ನಿಯಂತ್ರಣ) ಕಾಯ್ದೆ, 1974 ಮತ್ತು ವಾಯು (ನಿವಾರಣೆ ಮತ್ತು ಮಾಲಿನ್ಯ ನಿಯಂತ್ರಣ) ಕಾಯ್ದೆ, 1981 ರಡಿಯಲ್ಲಿ ಪ್ರಸ್ತಾಪಿತ ನಿರ್ದೇಶನ (Notice of Proposed Direction) ಅನ್ನು ವಲಯ ಹಿರಿಯ ಪರಿಸರ ಅಧಿಕಾರಿ, ಕಲಬುರಗಿ ರವರು ನೀಡಿರುತ್ತಾರೆ.<br><br>ಮುಂದುವರೆದು, ಮಂಡಳಿಯಿಂದ ದಿನಾಂಕ: 11.06.2025 ರಂದು 03 Solvent Distillation ಕೈಗಾರಿಕೆಗಳಿಗೆ ಹಾಗೂ 01 ಅಪಾಯಕಾರಿ ತ್ಯಾಜ್ಯ ಭೂಭರ್ತಿ (TSDF) ಘಟಕಕ್ಕೆ ಪರಿಸರ (ಸಂರಕ್ಷಣೆ) ಕಾಯ್ದೆ, 1986ರ ಸೆಕ್ಷನ್ 5 ರಡಿಯಲ್ಲಿ ಪ್ರಸ್ತಾಪಿತ ನಿರ್ದೇಶನ (Notice of Proposed Direction) ಅನ್ನು ನೀಡಲಾಗಿರುತ್ತದೆ.<br><br>14 ಕೈಗಾರಿಕೆಗಳಲ್ಲಿ ಒಂದು ಕೀಟನಾಶಕ ಉದ್ದಿಮೆಯು Zero Liquid Discharge (ZLD) ಅಳವಡಿಸಿಕೊಂಡಿರುವುದರಿಂದ ಸದರಿ ಉದ್ದಿಮೆಯನ್ನು ದಿನಾಂಕ:18.09.2025 ರಂದು ಮೌಖಿಕ ವಿಚಾರಣೆ ನಡೆಸಿ ಷರತ್ತುಬದ್ಧ ನಿಬಂಧನೆಗಳೊಂದಿಗೆ ವಿಸ್ತರಣಾ ಸಮ್ಮತಿ ಪತ್ರವನ್ನು ನೀಡಲಾಗಿದೆ. ಮುಂದುವರೆದು, ಸಾಮೂಹಿಕ ತ್ಯಾಜ್ಯ ಶುದ್ಧೀಕರಣ ಘಟಕದೊಂದಿಗೆ ದಿನಾಂಕ:03.12.2025 ರಂದು ಮೌಖಿಕ ವಿಚಾರಣೆ ನಡೆಸಿ, ಸಮ್ಮತಿ ಪತ್ರದಲ್ಲಿನ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ. ಉಳಿದ 12 ಉದ್ದಿಮೆಗಳಿಗೆ ಮುಂದಿನ ಕ್ರಮ ಜಾರಿಯಲ್ಲಿದೆ.<br><br>ಮುಂದುವರೆದು, ಸದರಿ ಕೈಗಾರಿಕಾ ಪ್ರದೇಶದಲ್ಲಿರುವ ಮೆ. ಶ್ರೀ ಆದಿತ್ಯ ಫಾರ್ಮಾ ಕೆಮ್, ಪ್ಲಾಟ್ ನಂ.265, ಕಡೆಚೂರು ಕೈಗಾರಿಕಾ ಪ್ರದೇಶ ಉದ್ದಿಮೆ ವಿರುದ್ಧ ಅನಧಿಕೃತ ತ್ಯಾಜ್ಯ ನೀರು ವಿಸರ್ಜನೆ ದೂರಿನ ಹಿನ್ನೆಲೆಯಲ್ಲಿ ಸದರಿ ಉದ್ದಿಮೆಗೆ ಮಂಡಳಿಯು ದಿನಾಂಕ:20.05.2025 ರಂದು ಮುಚ್ಚುವ ಆದೇಶವನ್ನು ನೀಡಲಾಗಿತ್ತು. ಸದರಿ ಉದ್ದಿಮೆಯು ತ್ಯಾಜ್ಯ ನೀರನ್ನು ಮಂಡಳಿ ವಿಧಿಸಿರುವ ಷರತ್ತಿನಂತೆ ಪಾಲಿಸುವುದಾಗಿ ಕೋರಿ ಮುಚ್ಚುವ ಆದೇಶವನ್ನು ತೆರವುಗೊಳಿಸುವಂತೆ ಕೋರಿದ ಹಿನ್ನೆಲೆಯಲ್ಲಿ ಸದರಿ ಉದ್ದಿಮೆಗೆ 06 ತಿಂಗಳ ಅವಧಿಗೆ ಮುಚ್ಚುವ ಆದೇಶವನ್ನು ದಿನಾಂಕ:08.07.2025 ರಂದು ತಾತ್ಕಾಲಿಕವಾಗಿ ಹಿಂಪಡೆಯಲಾಗಿದೆ. |

| | | |
|---|---|---|
| | | ಮುಂದುವರೆದು, ಮಂಡಳಿಯು ಸದರಿ ಕೈಗಾರಿಕಾ ಪ್ರದೇಶದಲ್ಲಿರುವ ಎಲ್ಲಾ ಉದ್ದಿಮೆಗಳನ್ನು ಕಾಲಕಾಲಕ್ಕೆ ತಪಾಸಣೆ ಮಾಡಿ ಯಾವುದೇ ಉದ್ದಿಮೆಯು ಮಂಡಳಿ ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸದಂತೆ ಕ್ರಮವಹಿಸಲಾಗುತ್ತಿರುವುದರಿಂದ ಪರಿಸರ ಇಲಾಖೆಯ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಪ್ರಮೇಯ ಉದ್ಭವಿಸುವುದಿಲ್ಲ. |
| ಉ) | 34 ಫಾರ್ಮಾ ಕಂಪನಿಗಳು ಸ್ಥಾಪನೆಗೆ ಅರ್ಜಿ ಹಾಕಿರುವುದರಿಂದ ಇವುಗಳಿಂದ ಆಗಬಹುದಾದ ಹಾನಿಯ ಕುರಿತು ಜನರು ಭಯಬೀತರಾಗಿದ್ದಾರೆ ಇದಕ್ಕೆ ಯಾವ ರೀತಿಯ ಕಟ್ಟೆನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುವುದು? | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 58 ಫಾರ್ಮಾ ಕಂಪನಿಗಳಿಗೆ ಸ್ಥಾಪನೆಗಾಗಿ ಸಮ್ಮತಿ ಪತ್ರ ನೀಡಿದ್ದು, ಇವುಗಳಲ್ಲಿ ಇದುವರೆಗೂ 25 ಫಾರ್ಮ ಕಂಪನಿಗಳಿಗೆ ಚಾಲನಾ ಸಮ್ಮತಿ ಪತ್ರ ನೀಡಿದ್ದು, ಉಳಿದ 33 ಫಾರ್ಮ ಕಂಪನಿಗಳು ಸ್ಥಾಪನಾ ಹಂತದಲ್ಲಿರುತ್ತದೆ.<br><br>ಮುಂದುವರೆದು, ಸದರಿ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪನೆಯಾಗುವ ಎಲ್ಲಾ ಫಾರ್ಮಾ ಕಂಪನಿಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಉದ್ದಿಮೆಯ ಆವರಣದಲ್ಲೇ ಭಾಗಶಃ ಶುದ್ಧೀಕರಿಸಿ ನಂತರ ಮುಂದಿನ ಹಂತದ ಶುದ್ಧೀಕರಣಕ್ಕಾಗಿ ಸದರಿ ಕೈಗಾರಿಕಾ ಪ್ರದೇಶದಲ್ಲಿರುವ ಸಾಮೂಹಿಕ ತ್ಯಾಜ್ಯ ಶುದ್ಧೀಕರಣ ಘಟಕಕ್ಕೆ ಕಳುಹಿಸುವ ಷರತ್ತಿನೊಂದಿಗೆ ಸಮ್ಮತಿ ಪತ್ರವನ್ನು ನೀಡಲಾಗುತ್ತಿದೆ. ಮುಂದುವರೆದು, ಮಂಡಳಿಯು ಎಲ್ಲಾ ಉದ್ದಿಮೆಗಳನ್ನು ಕಾಲಕಾಲಕ್ಕೆ ತಪಾಸಣೆ ಮಾಡಿ ಯಾವುದೇ ಉದ್ದಿಮೆಯು ಮಂಡಳಿಯು ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸದಂತೆ ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ.** ಅಪಜೀ 356 ಇಪಿಸಿ 2025.

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.